'ಡ್ಯೆಡೀsss...' (ಜೋರಾಗಿ)

'.....'

'ಡ್ಯಾಡೀ, ನಿನಗೆ ಗೊತ್ತಾ?' (ನನ್ನ ತೋಳುಗಳನ್ನು ಅಲ್ಲಾಡಿಸುತ್ತಾ)

'ಏನು?' ಕೈಲಿದ್ದ ಮೊಬೈಲಿನಿಂದ ಕಣ್ಣು ಕದಲಿಸದೇ ನಾನು ಕೇಳಿದೆ. ಈ ಹೊಸ ಫೋನಿನಲ್ಲಿ ಆಫೀಸಿನ ಇ–ಮೇಲ್‌ಗಳನ್ನು ನೋಡಬಹುದು. ಬಾಸು ಯಾರಿಗೋ ಕಟುವಾಗಿ ಬರೆದ ಮೇಲ್ ನನಗೂ ಕಾಪಿಯಾಗಿದೆ. ಅದೆಲ್ಲಾದರೂ ನನ್ನತ್ತ ತಿರುಗಿ ನಾನೇನಾದರೂ ಸಿಕ್ಕಿ ಬೀಳಬಹುದೋ ಎಂದು ನಾನು ಯೋಚಿಸುತ್ತಿದ್ದೆ.

'ನಿಂಗೊತ್ತಾ, ಸಮುದ್ರದ ದಡದಲ್ಲಿ ಮೊಟ್ಟೆಯೊಡೆದು ಹೊರಬರುವ ಆಮೆಯ ಮರಿಗಳು ರಾತ್ರಿಹೊತ್ತು ದೂರದಲ್ಲಿ ಕಾಣುವ ಶಹರದ ಬೆಳಕನ್ನು ನೀರು ಎಂದು ತಿಳಿದು ಅದರತ್ತ ಧಾವಿಸುತ್ತವೆಯಂತೆ! ಇಲ್ಲಿ ಬರೆದಿದೆ ನೋಡು.' ಯಾವುದೋ ಪುಸ್ತಕವನ್ನು ತೋರಿಸುತ್ತಾ ಮಗಳೆಂದಳು. ಒಮ್ಮೆ ಮೈಸೂರು ಝೂದಲ್ಲಿ ದೊಡ್ಡ ಗಾತ್ರದ ಆಮೆಯೊಂದನ್ನು ನೋಡಿದ ನಂತರದಿಂದ ಆಮೆಗಳ ಮೇಲೆ ಎಲ್ಲಿಲ್ಲದ ಆಸಕ್ತಿ ಅವಳಿಗೆ.

'ಹೌದಾ?... ವೆರಿ ಗುಡ್' ಎನ್ನುತ್ತ ಅವಳನ್ನು ಸಾಗಹಾಕಿದೆ.

ಮರುದಿನ ಆಫೀಸಿಗೆ ಕಾಲಿಟ್ಟ ಮೇಲೆ ನನ್ನದು ತಲೆ ಕೆರೆದುಕೊಳ್ಳಲೂ ಪುರುಸೊತ್ತಿಲ್ಲದ ಕೆಲಸ. ಹಲವು ಬಾರಿ ಮೋ–ನಿಗೆ ಫೋನ್ ಮಾಡಬೇಕೆಂದರೂ ಆಗಿರಲಿಲ್ಲ. 'ಇಷ್ಟೆಲ್ಲಾ ಉಪಕಾರ ತೆಗೆದುಕೊಂಡು ಎಲ್ಲಿ ನಾಪತ್ತೆಯಾಗಿ ಹೋದ ಎಂದು ಆತ ತಿಳಿದುಕೊಂಡಾನು, ನಾಳೆ ಮಾಡಲೇಬೇಕು' ಅಂದುಕೊಳ್ಳುವಷ್ಟರಲ್ಲಿ ಆತನೇ ಕರೆ ಮಾಡಿದ. 'ಬೆಂಗಳೂರಿನಲ್ಲಿದ್ದೇನೆ. ಸಂಜೆ ಸಿಗೋಣ ಬಾ' ಎಂದ.

**2**

ಮೋ– ನಲ್ಲಿ ಎಲ್ಲಕ್ಕಿಂತ ಮೊದಲು ನನಗೆ ಆಕರ್ಷಕವಾಗಿ ಕಾಣುವುದು, ಆತ ಮಾತನಾಡುವ ಶೈಲಿ. ತುಸು ಗಡಸೇ ಎನ್ನಿಸುವ ಸ್ಟೈಲಿಶ್ ಧ್ವನಿಯಲ್ಲಿ ಆತ ಉದ್ದುದ್ದ ಇಂಗ್ಲಿಷ್ ವಾಕ್ಯಗಳನ್ನು ಹೇಳಿ ಕೊನೆಯಲ್ಲಿ, 'ಅಷ್ಟೇ', 'ಗೊತ್ತಾಯ್ತಾ' ಇತ್ಯಾದಿ ಕನ್ನಡ ಶಬ್ದಗಳೊಡನೆ ಮಾತು ಮುಗಿಸುವ ಪರಿ ಅನನ್ಯ. ನನಗೂ ಅದೇರೀತಿ ಇಂಗ್ಲೀಷಿನ ವಾಕ್ಯಗಳನ್ನು ಬಳಸಿ ಕನ್ನಡ ಮಾತನಾಡಲು ಆಸೆಯಿದೆ. ಆದರೆ ಈ ರೀತಿ ಕಲಿತವರೆದುರು ನಾನು ಬರುವ ಮಾತೂ ಬಾರದವನಾಗುತ್ತೇನೆ. ಒಂದೇ ಒಂದು ಮಾತನಾಡದಿದ್ದರೂ ನನಗೆ ಇಂಗ್ಲಿಷ್ ಸರಿಯಾಗಿ ಬರುವುದಿಲ್ಲ ಎಂಬುದು ನನ್ನ ನೋಡಿಯೇ ಇವರಿಗೆಲ್ಲ ಗೊತ್ತಾಗಿದೆ ಎಂದೆನಿಸಲು ಶುರುವಾಗುತ್ತದೆ. ನಾವು ಭಾರತೀಯರು ಇಂಗ್ಲಿಷ್ ಮಾತನಾಡುವ ರೀತಿಯನ್ನು ಮೋ ಯಾವಾಗಲೂ ಅಣಕಿಸುತ್ತಿರುತ್ತಾನೆ. 'ನೀನು ಬರ್ತೀಯಾ ಅಲ್ವಾ?' ಎಂಬುದನ್ನು ನೇರವಾಗಿ ತರ್ಜುಮೆ ಮಾಡಿ 'ಯು ಆರ್ ಕಮಿಂಗ್ ನೋ?' ಎಂದು ಕೇಳಿದರೆ; ಕಮಿಂಗ್ ಯಸ್ ಅಂತಾನೋ ಅಥವಾ ಕಮಿಂಗ್ ನೋ ಅಂತಾ ಅರ್ಥವೋ? ಬಟ್ ಇಟ್ ಈಸ್ ಲೈಕ್ ದ್ಯಾಟ್ ಓನ್ಲೀ...' ಎನ್ನುತ್ತಾ ಗಹಗಹಿಸಿ ನಗುತ್ತಾನೆ.

ಅದರಲ್ಲೂ ಆತ 'ವದ್ಧಾsss...' ಎಂದು ಹೇಳುವ ರೀತಿಯೇ ಒಂಥರಾ ಚೆಂದ. 'ವ'ವನ್ನು ಒತ್ತಿ ಹೇಳಿ ನಂತರ ಮೊದಲ 'ದ'ವನ್ನು ಮೆದುವಾಗಿಯೂ ಎರಡನೇ 'ಧ'ವನ್ನು ಜೋರಾಗಿ ಹೇಳುತ್ತಲೇ ಎಳೆಯುವುದು ಪಕ್ಕಾ ಸ್ಪ್ಯಾನಿಶ್ ಉಚ್ಚಾರವೇ. ಅದು ಸ್ಪ್ಯಾನಿಶ್ ಭಾಷೆಯ ಶಬ್ದವಂತೆ. ಸ್ಪೇನ್ ದೇಶದಲ್ಲೇ ಹೆಚ್ಚಿನ ವ್ಯವಹಾರಗಳನ್ನು ನಡೆಸುವ ಆತ ಸ್ಪ್ಯಾನಿಶ್‌ಅನ್ನು